SCCH – 01
MVC No.6700/2023
PW2

**<u>ಸಾಕ್ಷಿಗೆ ದಿನಾಂಕಃ 24.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ Smt.EKS ರವರಿಂದಃ</u>**

1) ನಾನು ಈ ಪ್ರಕರಣದಲ್ಲಿ ಸಾಕ್ಷಿದಾರನಾಗಿದ್ದೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) ನ್ಯಾಯಾಲಯವು ಕಳುಹಿಸಿದ್ದ ಸಮನ್ಸ್ ನಲ್ಲಿ ನಮೂದು ಮಾಡಿದ್ದಂತಹ ದಾಖಲೆಗಳನ್ನು ನಾನು ಈ ದಿನ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ.

3) ಅನುಮತಿ ಪತ್ರವನ್ನು **ನಿ.ಪಿ.11** ಎಂದು ಗುರುತಿಸಿದೆ.

4) **Mamarani Jena** ರವರು ನಮ್ಮ ಸಂಸ್ಥೆಗೆ ಯಾವಾಗ ದಾಖಲು ಆಗಿದ್ದಾರೆ ಮತ್ತು ಅವರಿಗೆ ಯಾವ ರೀತಿಯ ಗಾಯಗಳು ಆಗಿದ್ದವು ಮತ್ತು ಆಕೆಗೆ ಯಾವ ರೀತಿಯ ಚಿಕಿತ್ಸೆಯನ್ನು ಕೊಡಲಾಗಿದೆ ಎಂಬ ಎಲ್ಲಾ

ಮಾಹಿತಿಗಳನ್ನು ಒಳಗೊಂಡಿರುವಂತಹ ಎರಡು ಫೈಲ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.**12** ಮತ್ತು ನಿ.ಪಿ.**13** ಎಂದು ಗುರುತಿಸಿದೆ.

**ಸೂಚನೆಃ** ನಿ.ಪಿ.**12** ಮತ್ತು **13** ಎಂದು ಗುರುತು ಆಗಿರುವ ಫೈಲ್ ಗಳಲ್ಲಿ ಒಟ್ಟು **23 X-ray films** ಗಳು ಸಹಾ ಇವೆ.

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.ಕೆ.ಪಿ. ವಕೀಲರಿಂದಃ**

1) ಮೇಲೆ ಹೇಳಿದ **Mamarani Jena** ರವರಿಗೆ ಆದಂತಹ ಗಾಯಗಳಿಗೆ ಸಂಬಂಧವಾಗಿ **Medico Legal case** ಸಹಾ ಆಗಿದೆ. ಸದರಿ ಎಂ.ಎಲ್.ಸಿ ರಿಜಿಸ್ಟರ್ ಗಳನ್ನು ಹಾಜರುಪಡಿಸಲು ನಮಗೆ ಯಾವುದೇ ತೊಂದರೆ ಇರುವುದಿಲ್ಲ.

2) ನಿ.ಪಿ.**12** ಎಂದು ಗುರುತು ಆಗಿರುವ ದಾಖಲೆಯಲ್ಲಿ ದಿಃ**14.08.2023** ರಂದು **6** ಗಂಟೆ ಸಮಯದಲ್ಲಿ ಅಪಘಾತವು ಆಗಿದೆ ಎಂಬುದಾಗಿ ನಮೂದು ಇದೆ. ಸದರಿ ಪುಟವನ್ನು **identification** ಉದ್ದೇಶಕ್ಕಾಗಿ ನಿ.ಎಸ್.**1** ಎಂದು ಗುರುತಿಸಲಾಯಿತು.

3) ಅದೇ ರೀತಿ ನಿ.ಪಿ.**12** ರಲ್ಲಿ ಇರುವ ಮತ್ತೊಂದು ಪುಟದಲ್ಲಿ ಸಹಾ ಡಾ.ಸೌಮ್ಯ ರವರು "ಆರ್.ಟಿ.ಎ. ದಿಃ**14.08.2023"** ಎಂಬುದಾಗಿ ನಮೂದು ಮಾಡಿದ್ದಾರೆ ಎಂದರೆ ಸರಿ. ಸದರಿ ಪುಟವನ್ನು

**identification** ಉದ್ದೇಶಕ್ಕಾಗಿ ನಿ.ಎಸ್.**2** ಎಂದು ಗುರುತಿಸಲಾಯಿತು.

4) ಕೇವಲ ಅರ್ಜಿದಾರರಿಗೆ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು.

**ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಿಂದಃ**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.